# ಮೋಡ ಮೋಡ ಓಡುತ್ತೆ

ಮೋಡ ಮೋಡ ಓಡುತ್ತೆ
ಓಡಿ ಓಡಿ ದಣಿಯುತ್ತೆ
ಒಂದಕ್ಕೊಂದು ತಾಗುತ್ತೆ
ನಾಚಿ ಮೈ ನೀರಾಗುತ್ತೆ
ಮಳೆಹನಿಯಾಗಿ ಸುರಿಯುತ್ತೆ!

ಮೋಡ ಮೋಡ ಓಡುತ್ತೆ
ಕಣ್ಣಾಮುಚ್ಚೇ ಆಡುತ್ತೆ
ಗರಿಗರಿಯಾಗಿ ಹರಡುತ್ತೆ
ಹಿರಿಹಿರಿಯಾಗಿ ಹಿಗ್ಗುತ್ತೆ
ಫಳಫಳ ಮಿಂಚು ಹೊಳೆಯುತ್ತೆ!

ಮೋಡ ಮೋಡ ಓಡುತ್ತೆ
ಗುಡುಗುಡು ಸದ್ದು ಮಾಡುತ್ತೆ
ಬಾನಂಗಳದಲಿ ತೇಲುತ್ತೆ
ಪರಿಪರಿ ರೂಪ ತಾಳುತ್ತೆ
ಎಲ್ಲರ ಕಣ್ಮನ ಸೆಳೆಯುತ್ತೆ!

**■ ರಾಜಶೇಖರ ಕುಕ್ಕುಂದಾ**



ವಿಜಯಕುಮಾರಿ

ಎಂದು ಅಸಹನೆಯಿಂದ ನುಡಿದರು.

'ಲಾರೆನ್ಸ್ ಅವರೇ, ಇಂಥ ಕ್ಷುಲ್ಲಕ ಕೆಲಸ ಅಂದರೆ ಮೂಕ ಪ್ರಾಣಿಯೊಂದರ ನೋವಿಗೂ ಸ್ಪಂದಿಸುವ ಗುಣ ಇರುವುದರಿಂದಲೇ ಗಾಂಧೀಜಿ ಮಹಾತ್ಮರಾಗಿದ್ದಾರೆ' ಎಂದು ಮೌಲಾನಾ ಆಜಾದ್ ಅವರು ತಿರುಗೇಟು ನೀಡಿದರು. ಅನಂತರ ಲಾರೆನ್ಸ್, ಗಾಂಧೀಜಿಯವರನ್ನು ಗಮನಿಸುತ್ತಿದ್ದರು. ಮೇಕೆಯ ಕಾಲಿಗೆ ಕೆಮ್ಮಣ್ಣು ಪಟ್ಟಿಯನ್ನು ಕಟ್ಟಲು ಗಾಂಧೀಜಿಯವರು ತೋರಿಸುತ್ತಿದ್ದ ಶ್ರದ್ಧೆಯನ್ನು ಕಂಡು 'ಮಹಾನ್ ಆತ್ಮವೊಂದು ಇಲ್ಲಿ ಕೆಲಸ ಮಾಡುತ್ತಿದೆ (ಎ ಗ್ರೇಟ್ ಸೋಲ್ ಈಸ್ ವರ್ಕಿಂಗ್ ಹಿಯರ್)' ಎಂದು ಉದ್ಗಾರ ತೆಗೆದರು. ನಂತರ ಸಭೆಗೆ ಬಂದ ಗಾಂಧೀಜಿಯವರು 'ಆ ಮೂಕ ಪ್ರಾಣಿಯೊಂದರ ನೋವಿನ ನಿವಾರಣೆ ನಮ್ಮ ಸಭೆಯ ರಾಜಕಾರಣಕ್ಕಿಂತ ಶ್ರೇಷ್ಠವೆಂದು ನಾನು ಭಾವಿಸುತ್ತೇನೆ' ಎಂದರು.

ಒಂದೇ ದಿನದಲ್ಲಿ ಯಾರೂ ಮಹಾತ್ಮರೆನಿಸಿಕೊಳ್ಳುವುದಿಲ್ಲ. ಭಾರತವನ್ನು ಆಳುತ್ತಿದ್ದ ಬ್ರಿಟೀಷ್‌ರೂ ಅವರನ್ನು ಮಹಾತ್ಮರೆಂದು ಕರೆಯುತ್ತಿದ್ದರೆಂದರೆ ಅದರ ಹಿಂದಿರುವ ಗಾಂಧೀಜಿಯವರ ಸಾತ್ವಿಕತೆ, ಶ್ರದ್ಧೆ, ಪ್ರಾಮಾಣಿಕತೆ ಅಪಾರವಾದುದು ಅಲ್ಲವೇ? (ಆಧಾರ)

**■ ಪ್ರಕಾಶ ಎಸ್. ಮನ್ನಂಗಿ**



ಮಂಜುನಾಥ ಹುಲಕೊಪ್ಪದ